# ಕವಿತೆ

ಯಾರೋ ಬರುತಿರುವಳು ಅಪೂರ್ವ ಚೆಲುವೆ
ಕಣ್ಣು ತುಟಿ ಕಟಿಯೆಲ್ಲ
ಪೂರ್ವ ಕವಿಗಳು ಬಣ್ಣಿಸಿದ ಹಾಗೇ
ಬರುಬರುತ್ತ ಇದೇನು
ಕೈಯಲಿ ವಿಸ್ಕಿ ಗ್ಲಾಸು ಸಿಗರೇಟು
ಬಳಿ ಬಂದವಳು ಬಡ ಮುದಿಯೆ
ಗಾಳಿಗದುರುತ್ತಿರುವ ಹಣ್ಣೆಲೆ!

ನಗು ಅವಳ ಕಣ್ಣಲ್ಲಿ –ಕೇಳುವಳು
ಮಗಾ ಏನು ಬೇಕು ಮಣ್ಣೆ ಬೇಕಾ
ಸಡಿಲಿಸುವಳು ರವಿಕೆ
ಆಸೆಭರಿತ ಕಣ್ಣಿಗೆ ಜೋತು ಬಿದ್ದ ಮೊಲೆ
ನಿಸರ್ಗ ತನ್ನದನೆಲ್ಲ ಸೆಳೆದ ಮೇಲೂ
ಆಕೆ ಅಪೂರ್ವ ಸುಂದರಿಯೇ!

ಹೇಳುವಳು–ಭೂಮಿ ಹುಟ್ಟಿನಿಂದ ಇಂದಿನವರೆಗಿನ
ಎಲ್ಲ ಕತೆ: ಸೀತೆ ದ್ರೌಪದಿ ಹೆಲೆನಳಾಗಿ
ತಳೆದೆಲ್ಲ ಅವತಾರ; ಎಷ್ಟೆಲ್ಲ ದಾಳಿಗೀಡಾಗಿಯೂ
ಪ್ರಾಣ ಕೊಂಕದಿರುವುದ

ಅವಳ ತೊಗಲಿನ ನಿರಿಗೆ ಮಡಿಕೆಗಳಲ್ಲಿ
ಹುದುಗಿರುವ ದಾಳಿಕೋರರ ಕೂಸುಗಳನೆಲ್ಲ ತಕ್ಕೋ
ಕೊಡವುವಳು
ಭಯದಿಂದ ಮರಗಟ್ಟಿ ಏನೂ ಕೇಳದಾದೆ ಅವಳಿಂದ
ಎಲ್ಲ ಮಾಸಿದ ಮೇಲೂ ಅವಳ ಮಾಸದಿಹ ನಗೆಯೊಂದ

● ಎಸ್. ಮಂಜುನಾಥ್

